# ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–560 002
ದೂರವಾಣಿ: (080) 22215072

ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ 3ಪ್ರತಿಯನ್ನು ಲಗತ್ತಿಸಬೇಕು

## ಶಿಷ್ಯವೇತನ ಅರ್ಜಿ ನಮೂನೆ

**ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ :** 15–9–2018

1. ಅಭ್ಯರ್ಥಿಯ ಪೂರ್ಣ ಹೆಸರು

2. ವಿಳಾಸ

   ದೂರವಾಣಿ/ಮೊಬೈಲ್

3. ತಂದೆ : ಪೋಷಕರ ಹೆಸರು:

4. ಹುಟ್ಟಿದ ದಿನಾಂಕ ಮತ್ತು ವರ್ಷ (ಪ್ರಮಾಣ ಪತ್ರ ಲಗತ್ತಿಸಿ)

5. ವಿದ್ಯಾರ್ಹತೆ

6. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/
   ಹಿಂದುಳಿದ ವರ್ಗ/ಸಾಮಾನ್ಯ ವರ್ಗ
   ಇತರ ಯಾವ ಗುಂಪಿಗೆ ಸೇರಿದವರು ನಮೂದಿಸಿ.
   ಎ. ಪ.ಜಾ./ಪ.ಪಂ. ಶಿಷ್ಯವೇತನ ಪಡೆದ್ದಿದಿಲ್ಲಿ --------ವರ್ಷ ಎಂದು ನಮೂದಿಸಿ.

7. ಈ ಹಿಂದೆ ಸಂಗೀತ ನೃತ್ಯ ಅಕಾಡೆಮಿಯಿಂದ ಶಿಷ್ಯವೇತನ ಪಡೆದಿದ್ದರೆ ಈ ಕೆಳಗಿನಂತೆ ವಿವರ ನೀಡಿ.

   ಅ. ಶಿಷ್ಯವೇತನ ಪಡೆದ ವರ್ಷ

   ಆ. ಕಲಾಕ್ಷೇತ್ರ ಮತ್ತು ಪ್ರಕಾರ

   (ಸೂಚನೆಯಲ್ಲಿರುವ ಅಂಕಣ 1ನ್ನು ನೋಡುವುದು)

8. ಈ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕೇಂದ್ರ/ರಾಜ್ಯ ಸರ್ಕಾರದಿಂದ
   ಯಾವುದೇ ಶಿಷ್ಯವೇತನ ಪಡೆಯುತ್ತಿದ್ದಲ್ಲಿ ಅದರ ವಿವರ ನೀಡಿ.

9. **ಈಗ ಶಿಷ್ಯವೇತನ ಪಡೆಯಲಿಚ್ಛಿಸುವ ಕಲಾಕ್ಷೇತ್ರ ಮತ್ತು ಪ್ರಕಾರ**
   (ಸೂಚನೆಯಲ್ಲಿರುವ ಅಂಕಣ 1ನ್ನು ನೋಡುವುದು)

10. ಹೇಳಬಯಸುವ ಇತರೆ ವಿಷಯಗಳು

### ಅಭ್ಯರ್ಥಿಯ ಪ್ರಮಾಣ ಪತ್ರ

ಮೇಲೆ ತಿಳಿಸಿದ ಎಲ್ಲಾ ವಿಷಯಗಳು ಸತ್ಯವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :

ಸ್ಥಳ :

ಅಭ್ಯರ್ಥಿಯ ಸಹಿ

# ಶಿಷ್ಯವೇತನ ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಸೂಚನೆಗಳು

1. ಒಬ್ಬ ಅಭ್ಯರ್ಥಿಗೆ ಒಂದು ಕಲಾಕ್ಷೇತ್ರದಲ್ಲಿ ಅಥವಾ ಒಂದು ಕಲಾಕ್ಷೇತ್ರದ ಪ್ರಕಾರದಲ್ಲಿ ಒಂದು ಸಲ ಮಾತ್ರಶಿಷ್ಯವೇತನ ನೀಡಲಾಗುವುದು. ಅಭ್ಯರ್ಥಿಯು ಈ ಹಿಂದೆ ಶಿಷ್ಯವೇತನ ಪಡೆದ ಕಲಕ್ಷೇತ್ರ ಅಥವಾ ಆ ಕಲಾಕ್ಷೇತ್ರದ ಪ್ರಕಾರವನ್ನು ಬಿಟ್ಟು ಬೇರೆ ಇತರ ಕಲಾಕ್ಷೇತ್ರ ಅಥವಾ ಕಲಾಪ್ರಕಾರದಲ್ಲಿ ಪರಿಣಿತನಾಗಿದ್ದರೆ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸಬಹುದು.

**<u>ಕಲಾಕ್ಷೇತ್ರ ಮತ್ತು ಕಲಾಪ್ರಕಾರಗಳ ವಿವರ</u>**

| | **ಕಲಾಕ್ಷೇತ್ರ** | **ಕಲಾ ಪ್ರಕಾರ** |
|---|---|---|
| ಅ. | ಕರ್ನಾಟಕ ಸಂಗೀತ | ಹಾಡುಗಾರಿಕೆ, ಪಿಟೀಲು, ವೀಣೆ, ಕೊಳಲು, ಮೃದಂಗ, ಘಟಂ, ಖಂಜರ,ಡೋಲು, ನಾದಸ್ವರ ಮತ್ತು ಸಂಬಂಧಿತ ಇತರೆ ವಾದ್ಯಗಳು |
| ಆ. | ಹಿಂದುಸ್ತಾನಿ ಸಂಗೀತ | ಗಾಯನ, ತಬಲಾ, ಸಿತಾರ, ಶಹನಾಯಿ, ಕೊಳಲು, ಸಂತೂರ್, ಹಾರ್ಮೋನಿಯಂ ಮತ್ತು ಸಂಬಂಧಿತ ಇತರೆ ವಾದ್ಯಗಳು. |
| ಇ. | ನೃತ್ಯ | ಭರತನಾಟ್ಯ, ಕೂಚಿಪುಡಿ, ಕಥಕ್, ಒಡಿಸ್ಸಿ |
| ಈ. | ಸುಗಮ ಸಂಗೀತ | |
| ಉ. | ಕಥಾಕೀರ್ತನ | |
| ಊ. | ಗಮಕ | |

2. ಅಭ್ಯರ್ಥಿಗಳ ವಯೋಮಿತಿ **16 ರಿಂದ 24 ವರ್ಷ** ಒಳಗಿರಬೇಕು.
3. ಅಭ್ಯರ್ಥಿಯು ನಿಗದಿತ ಅರ್ಜಿ ನಮೂನೆಯಲ್ಲಿ ಕನ್ನಡದಲ್ಲಿ ಸ್ಪಷ್ಟವಾಗಿ ಮಾಹಿತಿಗಳನ್ನು ತುಂಬಿ ಕೊನೆಯ ದಿನಾಂಕದ ಒಳಗಾಗಿ ಅಕಾಡೆಮಿ ಕಾರ್ಯಾಲಯಕ್ಕೆ ತಲುಪುವಂತೆ ಕಳುಹಿಸಿಕೊಡಬೇಕು.
4. ಅಭ್ಯರ್ಥಿಗಳು ತಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಮೂರು ಭಾವಚಿತ್ರವನ್ನು ಅರ್ಜಿಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಲಗತ್ತಿಸಬೇಕು.
5. ಅಭ್ಯರ್ಥಿಗಳು ಜನ್ಮದಿನಾಂಕದ ಪ್ರಮಾಣಪತ್ರವನ್ನು ತಪ್ಪದೆ ಅರ್ಜಿಯೊಂದಿಗೆ ಲಗತ್ತಿಸಬೇಕು.
6. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಶಿಷ್ಯವೇತನ ಸಂದರ್ಶನದಲ್ಲಿ ಹಾಜರಾಗಬೇಕು.
7. **ಅರ್ಜಿಯೊಂದಿಗೆ ಶಿಷ್ಯವೇತನದ ಇತ್ತೀಚಿನ ಪಠ್ಯಕ್ರಮವನ್ನು ನೀಡಲಾಗಿದ್ದು, ಪಠ್ಯಕ್ರಮ ಹಾಗೂ ಸೂಚನಾ ಹಾಳೆಯನ್ನು ಅಭ್ಯರ್ಥಿಗಳು ತಮ್ಮ ಬಳಿಯೇ ಇಟ್ಟುಕೊಂಡು ಅರ್ಜಿಯನ್ನು ಮಾತ್ರ ತುಂಬಿ ಕಳುಹಿಸಿಕೊಡಬೇಕು.**
8. ಶೃತಿ ಹಾಗೂ ತಬಲ ಮತ್ತು ಮೃದಂಗ ಪಕ್ಕವಾದ್ಯ ವ್ಯವಸ್ಥೆಯನ್ನು ಅಕಾಡೆಮಿ ವತಿಯಿಂದ ಮಾಡಲಾಗುವುದು ಹಾಗೂ ಅಭ್ಯರ್ಥಿಗಳು ಕಡ್ಡಾಯವಾಗಿ ಶೃತಿ ಹಾಗೂ ತಾಳದ ಜೊತೆ ಹಾಡಬೇಕು.
9. ವಾದ್ಯ ಸಂಗೀತ ಹಾಗೂ ತಾಳವಾದ್ಯಗಳ ಸಂದರ್ಶನದಲ್ಲಿ ಹಾಜರಾಗುವ ಅಭ್ಯರ್ಥಿಗಳು ತಾವೇ ತಮಗೆ ಬೇಕಾದ ವಾದ್ಯ ಪರಿಕರಗಳನ್ನು ತರಬೇಕು.
10. ನೃತ್ಯದ ಅಭ್ಯರ್ಥಿಗಳು ಸಂದರ್ಶನ ಸಂದರ್ಭದಲ್ಲಿ ಅಭ್ಯಾಸದ ಉಡುಪನ್ನು ಬಳಸಬಹುದಾಗಿದೆ. ಅಕಾಡೆಮಿ ವತಿಯಿಂದ ಸಿ.ಡಿ.ಪ್ಲೇಯರ್‌ನ್ನು ಒದಗಿಸಲಾಗುವುದು. ಇದಕ್ಕೆ ಹೊಂದುವಂತಹ ಯಾವುದೇ ಮಾಧ್ಯಮವನ್ನು (ಮೊಬೈಲ್, ಸಿ.ಡಿ., ಐಪ್ಯಾಡ್, ಎಂಪಿ3 ಪ್ಲೇಯರ್ ಇತ್ಯಾದಿ) ಉಪಯೋಗಿಸಬಹುದಾಗಿದೆ.

    ಅಭ್ಯರ್ಥಿಗಳು ಇಚ್ಛಿಸಿದಲ್ಲಿ ಪಕ್ಕವಾದ್ಯಗಾರರನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕರೆತರಬಹುದಾಗಿದೆ.
11. ಸಮಯಕ್ಕೆ ಸರಿಯಾಗಿ ಅಭ್ಯರ್ಥಿಗಳು ಸಂದರ್ಶನ ಏರ್ಪಡಿಸಿದ ಸ್ಥಳದಲ್ಲಿ ಹಾಜರಿರಬೇಕು. ಮತ್ತು ಮುಂಚಿತವಾಗಿ ಹಾಜರಾತಿ ಪುಸ್ತಕದಲ್ಲಿ ಹೆಸರು ಬರೆದು ಸಹಿ ಮಾಡಬೇಕು.
12. ಅಕಾಡೆಮಿ ಸಿದ್ಧಪಡಿಸಿದ ಪಟ್ಟಿಯಂತೆ ಅಭ್ಯರ್ಥಿಗಳ ಸಂದರ್ಶನ ನಡೆಸಲಾಗುವುದು.
13. ಶಿಷ್ಯವೇತನ ಆಯ್ಕೆಯ ವಿಷಯದಲ್ಲಿ ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.
14. ಅಪ್ರಾಮಾಣಿಕತೆಯಿಂದ ವರ್ತಿಸಿದಲ್ಲಿ ಶಿಷ್ಯವೇತನ ರದ್ದುಪಡಿಸಲಾಗುವುದು.

# ಶಿಷ್ಯವೇತನ ಪಠ್ಯಕ್ರಮ

## ಕರ್ನಾಟಕ ಶಾಸ್ತ್ರೀಯ ಸಂಗೀತ

**ಪ್ರಾಯೋಗಿಕ ವಿಭಾಗ**

1. ಬೇಗಡೆ, ದರ್ಬಾರ್, ಶಹನಾ, ಸಾವೇರಿ, ತೋಡಿ, ವಸಂತ–ಈ ರಾಗಗಳಲ್ಲಿ ಯಾವುದಾದರೂ 3 ಅದಿತಾಳ ವರ್ಣಗಳು (2 ಕಾಲಗಳಲ್ಲಿ) ಹಾಗೂ
2. ಭೈರವಿ, ಕಲ್ಯಾಣಿ, ಶಂಕರಾಭರಣ, ಕಾಂಬೋದಿ, ರೀತಿಗೌಳ–ಈ ರಾಗಗಳಲ್ಲಿ ಯಾವುದಾದರೂ 3 ರಾಗದಲ್ಲಿ ಮತ್ತು 2 ರಾಗದಲ್ಲಿ ಮಧ್ಯಮ ಮತ್ತು ವಿಳಂಬ ಕಾಲದ ಕೃತಿಗಳನ್ನು ಸಂಕ್ಷೇಪ ಆಲಾಪನೆ ಮತ್ತು ಸ್ವರ ಕಲ್ಪನೆ ಹಾಡಬೇಕು / ನುಡಿಸಬೇಕು.
3. (1) ಹಿಂದೋಳ (2) ಮಧ್ಯಮಾವತಿ (3) ಮೋಹನ (4) ಸಾವೇರಿ (5) ಬಿಲಹರಿ

   (6) ಕಾಂಭೋದಿ (7) ಶ್ರೀರಂಜನ (8) ಭೈರವಿ (9) ಕಾಮವರ್ಧಿನ

   (10) ಶಂಕರಾಭರಣ (11) ಕಲ್ಯಾಣಿ (12) ಖರಹರಪ್ರಿಯ

   ಈ ಮೇಲಿನ ರಾಗಗಳಲ್ಲಿ ಪ್ರಸಿದ್ದ ವಾಗ್ಗೇಯಕಾರರ ಆದಿ, ರೂಪಕ, ಖಂಡಛಾಪು, ಮಿಶ್ರಛಾಪು ತಾಳಗಳಲ್ಲಿನ ಮಧ್ಯಮ ಕಾಲದ ಕೃತಿಗಳು ಮತ್ತು 5 ವಿಳಂಬಕಾಲದ ಕೃತಿಗಳು. ಯಾವುದಾದರೂ 5 ರಾಗಗಳಿಗೆ (ಅಂದರೆ 2 ಔಡವ ಷಾಡವ ಸಂಪೂರ್ಣ) ಮತ್ತು ಸಂಕ್ಷಿಪ್ತ ಆಲಾಪನೆ 1 ಹಾಗೂ 2 ನೇ ಕಾಲದಲ್ಲಿ ಕಲ್ಪನಾಸ್ವರ ಹಾಕುವುದು. (3 ಮಧ್ಯಮ ಕಾಲದ ಕೃತಿಗಳು ಹಾಗೂ 2 ವಿಳಂಬ ಕಾಲದ ಕೃತಿಗಳಿಗೆ)
4. ದಾಸರ ಪದಗಳು – 3
5. ಶಿವಶರಣರ ವಚನಗಳು – 3
6. ಜಾವಳಿಗಳು – 2
7. ತಿಲ್ಲಾನಗಳು – 2

   ಅಭ್ಯರ್ಥಿಗಳು ಸಂದರ್ಶನದ ವೇಳೆಯಲ್ಲಿ ಕಲಿಕಾ ಪಟ್ಟಿಯನ್ನು ಒದಗಿಸುವುದು.

**ಶಾಸ್ತ್ರ ವಿಭಾಗ**

1. ಪ್ರಾಯೋಗಿಕ ವಿಭಾಗದ ರಾಗಗಳ ಲಕ್ಷಣಗಳು.
2. 35 ತಾಳಗಳು ಮತ್ತು ಅಂಗಗಳ ಬಗ್ಗೆ.
3. 75 ಮೇಳಕರ್ತರಾಗಗಳ ವಿವರಣೆ – ರಾಗ ಗುರುತಿಸುವ ಕ್ರಮ
4. ಸ್ವರ ಸ್ಥಾನಗಳ ಬಗ್ಗೆ ಅರಿವು.
5. ವಿವಿಧ ವಾದ್ಯಗಳ ಬಗ್ಗೆ ಮಾಹಿತಿ.
6. ಪ್ರಮುಖ ವಾಗ್ಗೇಯಕಾರರ ಜೀವನ ಮತ್ತು ಕೃತಿಗಳ ಪರಿಚಯ.

**ತಾಳವಾದ್ಯ – ಪ್ರಯೋಗ ವಿಭಾಗ**

**ಸಪ್ತ ಸೂಳಾದಿ ತಾಳಗಳಿಗೆ**

1. ತ ದಿ ತೋಂ ನಂ ವರಸೆ 3 ಕಾಲ ನಂತರ ಖಂಡ ಮತ್ತು ತ್ರಿಶ್ರದಲ್ಲಿಯೂ ಹೇಳುವುದು.
2. ಪಾಲುವರಸೆ ಚತುರಶ್ರ, ತ್ರಿಶ್ರ ಹಾಗೂ ಖಂಡ ನಡೆಗಳಲ್ಲಿ.
3. ಟೇಕಾವರಸೆ, ಚತುರಶ್ರ ಹಾಗೂ ತ್ರಿಶ್ರ ನಡೆಗಳಲ್ಲಿ ಹೇಳುವಿಕೆ ಮತ್ತು ನುಡಿಸುವುದು.
4. ಮೊಹರ ಮತ್ತು ಮುಕ್ತಾಯ, ಮುಕ್ತಾಯ ತ್ರಿಶ್ರದಲ್ಲಿಯೂ ಹೇಳುವುದು.
5. ತನ ಆವರ್ತನ, ಚತುರಶ್ರ ತ್ರಿಪುಟ, ಚತುರಶ್ರ ರೂಪಕ, ಮಿಶ್ರ ಛಾಪು ತಾಳ ಹಾಗೂ ಖಂಡಛಾಪು 7 ನಿಮಿಷಕ್ಕೆ ಮೀರದಂತೆ ನುಡಿಸಬೇಕು.
6. ಸರಳವಾದ ಕೃತಿಗಳಿಗೆ (ಪರೀಕ್ಷಕರು ಹಾಡಿದಾಗ) ಅನುಸರಣೆ ಮಾಡಿ ನುಡಿಸುವುದು.
7. ಗ್ರಹಗಳ ಸಾಧಾರಣ ಜ್ಞಾನ (ಸಮ, ವಿಷಮ)

**ಶಾಸ್ತ್ರ ಮತ್ತು ಶ್ರವಣಜ್ಞಾನ**

ತಾಳದ ದಶಪ್ರಾಣಗಳ ತಿಳಿವಳಿಕೆ

# ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ

## ಗಾಯನ

1. ಈ ಕೆಳಗಿನ ರಾಗಗಳಲ್ಲಿ ವಿಲಂಬಿತ ಛೋಟಾ ಖ್ಯಾಲ್(ಧೃತ್ ಏಕತಾಲ) ಹಾಡಲು ಹಾಗೂ ನುಡಿಸಲು ತಿಳಿದಿರಬೇಕು.
   ಅ) ಭೀಮಪಲಾಸ್ ಆ). ಯಮನ್ ಇ). ಬಿಹಾಗ ಈ). ಬೃಂದಾವನ ಸಾರಂಗ ಉ). ಕೇದಾರ
2. ಈ ಕೆಳಗಿನ ರಾಗಗಳಲ್ಲಿ ಛೋಟಾಖ್ಯಾಲ ಹಾಡಲು ತಿಳಿದಿರಬೇಕು (ತೀನ್ ತಾಲಗಳಲ್ಲಿ)
   ಅ) ಕಾಫಿ ಆ) ಬಾಗೇಶ್ರೀ ಇ) ಭೂಪ ಈ) ಮಧುವಂತಿ ಉ) ಮಾಲಕೌಂಸ
   ಊ) ದುರ್ಗಾ
3. 2 ದಾಸರ ಪದಗಳು 2 ವಚನಗಳನ್ನು ಹಾಡಲು ಕಲಿತಿರಬೇಕು.
4. 1) ಜನ್ಯ 2) ಜನಕ 3) ಪೂರ್ವಾಂಗರಾಗ 4) ಉತ್ತರಾಂಗ ರಾಗ 5) ಆಂದೋಲನ
   6) ಗಮಕ 7) ಬೋಲತಾನ 8) ಕೂಟತಾನ
   ಈ ಮೇಲಿನ ಪಾರಿಭಾಷಿಕ ಪದಗಳ ವಿವರಣೆಯನ್ನು ತಿಳಿದಿರಬೇಕು.
5. ಈ ಕೆಳಗಿನ ತಾಳಗಳ ಪರಿಚಯವಿರಬೇಕು.
   1) ತೀನತಾಲ 2) ಝಪ್‌ತಾಲ 3)ರೂಪಕ 4) ತಿಲವಾಡ 5) ದಾದರಾ
   (ತಾಳ ಕೈಯಲ್ಲಿ ಹಾಕಿ ತೋರಿಸಬೇಕು)

## ತಾಳವಾದ್ಯ ವಿಭಾಗ

1. ಈ ಕೆಳಗಿನ ತಾಳಗಳ ಶಾಸ್ತ್ರೀಯ ಮಾಹಿತಿ ನೀಡಿ ಕೈಯಲ್ಲಿ ತಾಳವನ್ನು ಹಾಕಿ ನುಡಿಸಿ ತೋರಿಸಬೇಕು.
   1) ದಾದರಾ 2) ಕೇಹರವಾ 3) ತೀನತಾಲ 4) ಝಪ್‌ತಾಲ್ 5) ತಿಲವಾಡ
   6) ರೂಪಕ್
2. ತೀನತಾಲದಲ್ಲಿ ಸೋಲೋ ನುಡಿಸಲು ಬರಬೇಕು.
3. ಝಪ್‌ತಾಲ್ ಮತ್ತು ರೂಪಕ್ ತಾಲ್‌ದಲ್ಲಿ ಒಂದು ಕಾಯ್ದಾ ಹಾಗೂ ಎರಡು ಗತ್ ಒಂದು ಚಕ್ರದಾರ್ ನುಡಿಸಲು ಬರಬೇಕು.
4. ಈ ತಾಳಗಳನ್ನು ದುಗನ್, ಚೌಗುನ್‌ನಲ್ಲಿ ಕೈಯಲ್ಲಿ ತಾಳ ಹಾಕಿ ನುಡಿಸಲು ತಿಳಿದಿರಬೇಕು.
   1. ದೃಪದ್ 2. ಧಮಾರ್
5. ಈ ಪಾರಿಭಾಷಿಕ ಶಬ್ದಗಳ ಜ್ಞಾನವಿರಬೇಕು.
   1. ಸಮ್ 2. ಮಾತ್ರಾ 3. ಕಾಯ್ದಾ 4. ಗತ್ 5, ತಿಹಾಯಿ
6. ಪರೀಕ್ಷಕರು ಹಾಡಿದ ತಾಳವನ್ನು ಗುರುತಿಸಿ ಸಾಥ್ ಮಾಡುವುದು.

## ಭರತನಾಟ್ಯ

1. ಪಾರಿಭಾಷಿಕ ಶಬ್ದಗಳ ಜ್ಞಾನ:
   ಅಡವು ಮತ್ತು ವೈವಿಧ್ಯ, ಶೊಲ್ಲಕಟ್ಟು, ನರ್ತನ ವಿಭಾಗಗಳು, ಅಂಗಶುದ್ಧಿ, ಅಂತ:ಪ್ರಾಣಗಳು, 35 ತಾಳಗಳ ಅರಿವು
2. ವರ್ಣದಲ್ಲಿ ಬರುವ ಜತಿಗಳನ್ನು ಹಾಗೂ ಅಲರಿಪುವನ್ನು ಹೇಳಿ ತೋರಿಸುವುದು.
3. ಒಂದು ಅಲರಿಪು, ಒಂದು ಜತಿಸ್ವರ, ಒಂದು ಪದವರ್ಣ, ಒಂದು ಕನ್ನಡದ ಕೃತಿ, ಒಂದು ತಿಲ್ಲಾನಗಳನ್ನು ನರ್ತಿಸಬೇಕು.
4. ನವರಸಗಳ ಅರಿವು ಮತ್ತು ಪ್ರಯೋಗ.
5. ನರ್ತಿಸುವ ನೃತ್ಯ ಬಂಧಗಳನ್ನು ತಾಳದೊಂದಿಗೆ ಹಾಡಿ ತೋರಿಸಿ ಕಾವ್ಯಾರ್ಥವನ್ನು ಮತ್ತು ಭಾವಾರ್ಥವನ್ನು ವಿವರವಾಗಿ ತಿಳಿಸುವುದು.
6. ಅಸಂಯುತ ಹಸ್ತ ಮತ್ತು ಸಂಯುತ ಹಸ್ತ ಮತ್ತು ವಿನಿಯೋಗ (ಅಭಿನಯದರ್ಪಣದಂತೆ)
7. ಶಿರೋಭೇದ, ದೃಷ್ಟಿಭೇದ.

## ಕಥಕ್

1. ಪಾರಿಭಾಷಿಕ ಶಬ್ದಗಳ ಜ್ಞಾನ

   ನರ್ತನ ವಿಭಾಗಗಳು, ತೋಡ, ಟುಕಡಾ, ತಿಹಾಯಿ, ಪರನ್, ಭ್ರಮರಿ, ತೀನ್‌ತಾಲ್, ಝಪ್‌ತಾಲ್ ತಾಳಗಳ ವಿವರಗಳು, ಸಂಯುತ, ಅಸಂಯುತ ಹಸ್ತಗಳ ಮತ್ತು ವಿನಿಯೋಗಗಳ ಅರಿವು (ಅಭಿನಯ ದರ್ಪಣದಂತೆ)
2. ಚತುರ್ವಿಧ ಅಭಿನಯಗಳ ವಿವರ.
3. ತತ್‌ಕಾರ್ ತೀನ್ ತಾಳದಲ್ಲಿ.
4. ಷಡಂತ್ ವಿವರ ಮತ್ತು ಪ್ರಯೋಗ (ತಾಳ ಹಾಕಿ ಹೇಳಬೇಕು) ಯಾವದಾದರೂ ಒಂದು ತಾಳದಲ್ಲಿ.
5. ಅಮದ್, ತೋಡಾ, ಟುಕಡಾ, ಥಾಟ್, ಪರನ್, ಚಕ್ಕರ್‌ದಾರ್, ಪರನ್, ಗತ್‌ನಿಕಾಸ್, ಗತಭಾವಗಳ ವಿವರ ಪ್ರಯೋಗದೊಂದಿಗೆ (ಮೇಲೆ ಹೇಳಿದ ಯಾವುದಾದರೂ ತಾಳದಲ್ಲಿ)
6. ಒಂದು ಠುಮ್ರಿ ಅಥವಾ ಕವಿತಾ, ಒಂದು ತರಾನ.
7. ನವರಸಗಳ ಅರಿವು ಮತ್ತು ಪ್ರಯೋಗ.
8. ನರ್ತಿಸುವ ನೃತ್ಯ ಬಂಧಗಳ ಕಾವ್ಯಾರ್ಥ ಮತ್ತು ಭಾವಾರ್ಥಗಳನ್ನು ತಿಳಿಸುವುದು.

## ಕೂಚಿಪುಡಿ

1. ಪಾರಿಭಾಷಿಕ ಶಬ್ಧಗಳ ಜ್ಞಾನ

   ನರ್ತನ ವಿಭಾಗಗಳು, ಪಾದವಿನ್ಯಾಸ, ಅಡವು ಪೂರ್ವರಂಗವಿಧಿ, ಅಂತ:ಪ್ರಾಣ, 35 ತಾಳಗಳ ಅರಿವು, ದರವು.
2. ದಶವಿಧ ಅಡವುಗಳನ್ನು ತಾಳ ಹಾಕಿ ಹೇಳಿ ತ್ರಿಕಾಲಗಳಲ್ಲಿ ಮಾಡಿ ತೋರಿಸುವುದು.
3. (ಚತುರ್ವಿಧ) ಅಭಿನಯದ ಪ್ರಾಮುಖ್ಯತೆ ಮತ್ತು ಪ್ರಯೋಗದಲ್ಲಿ ಮಾಡಿ ತೋರಿಸುವುದು.
4. ಸಂಯುತ ಅಸಂಯುತ ಹಸ್ತಗಳ ವಿನಿಯೋಗ (ನಾಟ್ಯಶಾಸ್ತ್ರ/ಅಭಿನಯ ದರ್ಪಣ)
5. ಐದು ಜಾತಿಯ ಜತಿಗಳು, ಒಂದು ಕನ್ನಡ ರಚನೆ, ಒಂದು ಶಬ್ದಂ, ಒಂದು ತರಂಗಂ, ಒಂದು ಕ್ಷೇತ್ರಯ್ಯ ಪದ, ಪ್ರವೇಶದರು ಅಥವಾ ನೃತ್ಯ ನಾಟಕದ ಸ್ವಲ್ಪ ಭಾಗ.
6. ನವರಸಗಳ ಅರಿವು ಮತ್ತು ಪ್ರಯೋಗ.
7. ನರ್ತಿಸುವ ನೃತ್ಯ ಬಂಧಗಳನ್ನು ತಾಳದಲ್ಲಿ ಹಾಡಿ ತೋರಿಸಬೇಕು.

## ಸುಗಮ ಸಂಗೀತ

1. ಶೃತಿ ಜ್ಞಾನ. ಲಯ ಜ್ಞಾನ ಇರಬೇಕು. ಗೀತೆಯ ಸಾಹಿತ್ಯ ಹಾಗೂ ರಚನಾಕಾರರ ಬಗ್ಗೆ ತಿಳಿದಿರಬೇಕು.
2. ಧ್ವನಿ ಸಂಸ್ಕರಣೆಯ ಬಗ್ಗೆ ಸಾಮಾನ್ಯ ಜ್ಞಾನವಿರಬೇಕು.
3. ಕರ್ನಾಟಕದಲ್ಲಿ ಪ್ರಚಲಿತವಿರುವ ಸುಗಮ ಸಂಗೀತ ಆದ್ಯ ಪ್ರವರ್ತಕರ (ಪಿ.ಕಾಳಿಂಗರಾವ್, ಪದ್ಮಚರಣ, ಎಚ್.ಆರ್.ಲೀಲಾವತಿ, ಮೈಸೂರು ಅನಂತಸ್ವಾಮಿ, ಡಾ.ಸಿ.ಅಶ್ವಥ್) ಹಾಗೂ ಸಮಕಾಲೀನರ ಬಗ್ಗೆ ತಿಳಿವಳಿಕೆ.
4. ಕುವೆಂಪು, ದ.ರಾ.ಬೇಂದ್ರೆ, ಗೋಪಾಲಕೃಷ್ಣ ಅಡಿಗ, ಕೆ.ಎಸ್.ನರಸಿಂಹಸ್ವಾಮಿ, ಜಿ.ಎಸ್.ಶಿವರುದ್ರಪ್ಪ, ಪು.ತಿ.ನರಸಿಂಹಾಚಾರ್ಯ, ಸಿದ್ದಯ್ಯ ಪುರಾಣಿಕ, ಚನ್ನವೀರಕಣವಿ, ಡಿ.ಎಸ್.ಕರ್ಕಿ, ಹೆಚ್.ಎಸ್. ವೆಂಕಟೇಶಮೂರ್ತಿ, ಡಿ.ವಿ.ಜಿ., ರಾಘವ, ಬಿ.ಆರ್.ಲಕ್ಷ್ಮಣರಾವ್, ಬಿ.ಎಂ.ಶ್ರೀ., ನಸಾರ್ ಅಹ್ಮದ್– ಈ ಮೇಲೆ ಹೇಳಿದ ಕವಿಗಳ 10 ಭಾವಗೀತೆಗಳ ಪಟ್ಟಿಯನ್ನು ತೀರ್ಪುಗಾರರಿಗೆ ನೀಡಬೇಕು. ಈ ಪೈಕಿ ತೀರ್ಪುಗಾರರು ಆಯ್ಕೆ ಮಾಡಿದ 2 ಭಾವಗೀತೆಗಳನ್ನು 5 ನಿಮಿಷಗಳಿಗೆ ಮೀರದಂತೆ, ಕವಿಯ ಭಾವವನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸುವಂತೆ ಹಾಡಬೇಕು. ಹಾಗೂ ಈ ಹತ್ತು ಭಾವಗೀತೆಗಳ ಪೈಕಿ 2 ಭಾವಗೀತೆಗಳಿಗೆ ಸ್ವರ ಸಂಯೋಜನೆಯು ಶಾಸ್ತ್ರೀಯ ರಾಗಗಳನ್ನು ಆಧರಿಸಿರಬೇಕು. ಸ್ವಂತ ಸ್ವರ ಸಂಯೋಜನೆಯ ಗೀತೆಗಳನ್ನು ಹಾಡಬಹುದು. ದಾಸರ ಪದಗಳು, ತತ್ವಪದಗಳು, ವಚನಗಳನ್ನು ಹಾಡಬಹುದು.
5. ಕನ್ನಡ ವ್ಯಾಕರಣದ ಬಗ್ಗೆ ಸಾಮಾನ್ಯ ಜ್ಞಾನ ಅವಶ್ಯ (ಉದಾ: ಸ್ವರಗಳು, ವ್ಯಂಜನಗಳು, ಗುರು. ಲಘು, ಛಂದಸ್ಸು, ಪ್ರತಿಪದಾರ್ಥ, ಉಚ್ಚಾರಣೆ, ಭಾವ ಇತ್ಯಾದಿ ವಿವರಣೆ)

## ಕಥಾಕೀರ್ತನ

1. ಶೃತಿ ಶುದ್ಧವಾಗಿ ಕೀರ್ತನೆಗಳನ್ನು ಹಾಡುವ ಅಭ್ಯಾಸವಿರಬೇಕು.
2. ಶುದ್ದ ಸಾಹಿತ್ಯ ಹಾಗೂ ಸ್ಪಷ್ಟ ಉಚ್ಚಾರಣೆ ಭಾವ ಮತ್ತು ಅರ್ಥಕ್ಕೆ ಹೆಚ್ಚು ಮಹತ್ವ.
3. ಒಟ್ಟು 3 ಕಥಾಕೀರ್ತನೆಗಳಲ್ಲಿ ಪರಿಣತಿ ಪಡೆದಿರಬೇಕು. (1 ಹರಿಕಥೆ, 1 ಶಿವಕಥೆ, 1 ಸಂತರ/ಮಹಾತ್ಮರ ಕುರಿತ ಕಥೆ) ತೀರ್ಪುಗಾರರು ಯಾವ ಕಥೆಯನ್ನು ಕೇಳಿದರೂ ಮಾಡಬೇಕು.
4. ಪುರಂದರದಾಸರು, ಕನಕದಾಸರು, ವ್ಯಾಸರಾಯರು, ಶ್ರೀಪಾದರಾಜರು, ವಾದಿರಾಜರೇ ಮೊದಲಾದ ಹರಿದಾಸರ 5 ಕೃತಿಗಳನ್ನು ಹಾಡಲು ಕಲಿತಿರಬೇಕು
5. ಸರ್ವಜ್ಞನ ವಚನಗಳು–5, ಬಸವಣ್ಣನವರ ವಚನಗಳು–3, ಅಕ್ಕಮಹಾದೇವಿ ವಚನಗಳು–3, ದೇವರ ದಾಸಿಮಯ್ಯನ ವಚನಗಳು–2, ಹಾಡಲು ಕಲಿತಿರಬೇಕು
6. ಮಂಕುತಿಮ್ಮನ ಕಗ್ಗ–2, ಹರಿಭಕ್ತಿಸಾರ–2, ಹರಿಕಥಾಮೃತಸಾರ–2, ಸೋಮೇಶ್ವರ ಶತಕ–2 ಪದ್ಯಗಳನ್ನು ಕಂಠಪಾಠ ಮಾಡಿರಬೇಕು.
7. ಕನಿಷ್ಠ 5 ರಾಗಗಳಲ್ಲಿ ಹಾಡುವ ಅಭ್ಯಾಸವಿರಬೇಕು.
8. ಕನ್ನಡ ಷಟ್ಪದಿ ಕಾವ್ಯಗಳ ಕಿರುಪರಿಚಯವಿರಬೇಕು. ಮಂಗಳಾಚರಣ ಪದ್ಯಗಳು.
9 ಕಥೆಗೆ ಪೂರಕವಾದ ಚಿಕ್ಕ ನೀತಿ ಬೋಧಕವಾದ ಒಂದು ಉಪಕಥೆಯಿರಬೇಕು.
10. ರಾಮಾಯಣ, ಮಹಾಭಾರತದಂತಹ ಉದ್ಗ್ರಂಥಗಳ ವಸ್ತುವಿನ ಬಗ್ಗೆ ತಿಳಿವಳಿಕೆ ಇರಬೇಕು.
11. ಉಗಾ–ಭೋಗಗಳಲ್ಲಿ ಕೂಡ ಪರಿಣಿತಿ ಇರಬೇಕು.

## ಗಮಕ

1. ಪಂಪನ ವಿಕ್ರಮಾರ್ಜುನ ವಿಜಯ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಕುಮಾರ ವ್ಯಾಸನ ಕರ್ನಾಟಕ ಭಾರತ ಕಥಾಮಂಜರಿ, ಚಾಮರಸನ ಪ್ರಭುಲಿಂಗಲೀಲೆ, ರತ್ನಾಕರವರ್ಣಿಯ ಭರತೇಶ ವೈಭವ, ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ – ಈ ಕಾವ್ಯಗಳಲ್ಲಿನ ಯಾವುದಾದರೂ ಒಂದೊಂದು ಭಾಗ ವಾಚನ ಮಾಡಿ, ವ್ಯಾಖ್ಯಾನ ಮಾಡಲು ಬರಬೇಕು. ಕವಿ ಕಾವ್ಯ ವಿಚಾರ ಗೊತ್ತಿರಬೇಕು.
2. ತ್ರಿಪದಿ ದಾಸರಪದಗಳು ಮತ್ತು ವಚನಗಳನ್ನು ಹಾಡುವುದರಲ್ಲಿ ಪರಿಶ್ರಮವಿರಬೇಕು.
3. ಉಗಾ–ಭೋಗಗಳಲ್ಲಿ ಕೂಡ ಪರಿಣಿತಿ ಇರಬೇಕು.



**ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ**
ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–560 002
ದೂರವಾಣಿ: (080) 22215072
ಈ–ಮೇಲ್ : karnatakasangeeta@gmail.com
ಅಂತರ್ಜಾಲ : www.karnatakasangeetanrithyaacademy.org